

# ವಿಶ್ವಸುಂದರಿಯ 'ಮನ್ ಕಿ ಬಾತ್'

**ಚೀನಾದಲ್ಲಿ ಈಚೆಗೆ ನಡೆದ ವಿಶ್ವಸುಂದರಿ ಸ್ಪರ್ಧೆಯಲ್ಲಿ ಹರಿಯಾಣದ ಮಾನುಷಿ ಛಿಲ್ಲರ್ 'ವಿಶ್ವಸುಂದರಿ ಪಟ್ಟ'ವನ್ನು ಮುಡಿಗೇರಿಸಿಕೊಂಡಿದ್ದಾರೆ. ಬಾಲಿವುಡ್ ನಟಿ ಪ್ರಿಯಾಂಕ ಛೋಪ್ರಾ, ಈ ಹಿಂದೆ ಇದೇ ಕಿರೀಟವನ್ನು ತಮ್ಮದಾಗಿಸಿಕೊಂಡಿದ್ದರು. ಪ್ರತಿಭಾವಂತೆಯಾದ ಮಾನುಷಿಗೆ ವೈದ್ಯೆ ಆಗಬೇಕೆಂಬ ಕನಸಿದೆಯಂತೆ..!**

■ **ವಿದ್ಯಾಶ್ರೀ ಎಸ್.**

'ತಾಯಿಯೇ ಅತಿ ಹೆಚ್ಚು ಸಂಭಾವನೆಗೆ ಅರ್ಹಳು. ನಾನು ಸಂಭಾವನೆ ಎಂದಾಕ್ಷಣ ದುಡ್ಡಿನ ವಿಷಯ ಮಾತ್ರವೇ ಹೇಳುತ್ತಿಲ್ಲ. ಪ್ರೀತಿ, ಗೌರವದ ಕುರಿತು ಮಾತನಾಡುತ್ತಿದ್ದೇನೆ. ತಾಯಿಯೇ ನನ್ನ ಜೀವನದ ಬಹುದೊಡ್ಡ ಸ್ಫೂರ್ತಿ. ಎಲ್ಲ ತಾಯಂದಿರು ತಮ್ಮ ಮಕ್ಕಳಿಗಾಗಿ ಹಾಗೂ ಸಂಸಾರಕ್ಕಾಗಿ ಎಷ್ಟೊಂದು ತ್ಯಾಗ ಮಾಡುತ್ತಾರೆ. ಹೀಗಾಗಿ ನನ್ನ ಪ್ರಕಾರ ತಾಯ್ತನಕ್ಕೆ ಹೆಚ್ಚಿನ ಗೌರವ, ಸಂಬಳ ಸಿಗಬೇಕು'

ಇದು ಇತ್ತೀಚೆಗಷ್ಟೇ ವಿಶ್ವಸುಂದರಿ ಪ್ರಶಸ್ತಿ ಗೆದ್ದಿರುವ ಮಾನುಷಿ ಛಿಲ್ಲರ್ ಸೌಂದರ್ಯ ಸ್ಪರ್ಧೆಯ ಅಂತಿಮ ಸುತ್ತಿನಲ್ಲಿ ಕೇಳಿದ ಪ್ರಶ್ನೆಗೆ ತಾಯಿಯ ಬಗ್ಗೆ ಭಾವುಕವಾಗಿ ನೀಡಿದ ಉತ್ತರ. ಅವರ ಉತ್ತರಕ್ಕೆ ನೆರೆದವರಿಂದ ಕಡತಾನದ ಸುರಿಮಳೆಯಾಯಿತು.

ಬರೋಬ್ಬರಿ 17 ವರ್ಷಗಳ ನಂತರ ಭಾರತಕ್ಕೆ 'ಮಿಸ್ ವರ್ಲ್ಡ್' ಕಿರೀಟ ತಂದುಕೊಟ್ಟವರು ಮಾನುಷಿ ಛಿಲ್ಲರ್. ವೈದ್ಯೆಯಾಗಬೇಕೆಂಬ ಕನಸಿನ ಜತೆಗೆ ಸೌಂದರ್ಯ ಸ್ಪರ್ಧೆಯಲ್ಲೂ ಗೆಲುವು ಸಾಧಿಸಿರುವ ಇವರು, ಬುದ್ಧಿವಂತಿಕೆಯನ್ನೂ ಬಳುವಳಿಯಾಗಿ ಪಡೆದಿದ್ದಾರೆ.

ಚೀನಾದಲ್ಲಿ ನಡೆದ ಈ ಸ್ಪರ್ಧೆಗೆ ಪ್ರಪಂಚದ ವಿವಿಧ ಭಾಗಗಳಿಂದ ಬಂದಿದ್ದ 108 ಸುಂದರಿಯರಲ್ಲಿ ಮಾನುಷಿ ಈ ಪಟ್ಟವನ್ನು ಅಲಂಕರಿಸಿದ್ದಾರೆ. ಪ್ರಿಯಾಂಕಾ ಚೋಪ್ರಾ (2000) ನಂತರ ಭಾರತದ ಮುಡಿಗೇರಿದ 'ವಿಶ್ವಸುಂದರಿ' ಕಿರೀಟದ ಹಿಂದೆ ಮಾನುಷಿಯ ಕಠಿಣ ಪರಿಶ್ರಮವಿದೆ.

ಈವರೆಗಿನ ವಿಶ್ವಸುಂದರಿ ಸ್ಪರ್ಧೆಯಲ್ಲಿ ಆಯ್ಕೆಯಾದ ಆರನೇ ಭಾರತೀಯ ಮಹಿಳೆ ಮಾನುಷಿ. ಈ ಸ್ಪರ್ಧೆಯಲ್ಲಿ